(ii) Shifting of Nagalapura forest area to other place for developing Tiger Project Scheme.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ನನ್ನ ಕಾಲಿಂಗ್ ಅಟೆನ್‌ಷನ್ ಏನು ಅಂದರೆ, ನಾಗಲಾಪುರದಲ್ಲಿ ಒಂದು ಟೈಗರ್ ಸ್ಕೀಮ್ ಮಾಡಬೇಕೆಂದು ಸರ್ಕಾರದವರ ಉದ್ದೇಶವಿದೆಯೆಂದು ಸುದ್ದಿ ಬಂದಿದೆ. ಅದರ ಬಗ್ಗೆ ಮಾಹಿತಿ ಬೇಕು.

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ನಾಗಲಾಪುರದಲ್ಲಿ ಯಾವುದೇ ಅರಣ್ಯ ಪ್ರದೇಶವನ್ನು ಟೈಗರ್ ಪ್ರಾಜೆಕ್ಟ್‌ಗೆ ಸೇರಿಸುವ ವಿಚಾರ ಸರ್ಕಾರದ ಮುಂದೆ ಇಲ್ಲ.

ಶ್ರೀ ಎಂ. ಮಹದೇವ್.—ಮಾನ್ಯ ಅಧ್ಯಕ್ಷರೇ, ಬಹುಶ: ಈ ಸ್ಕೀಮ್ ನಡೆಸುತ್ತಾರೆಂದು ನನಗೆ ವರ್ತಮಾನ ಬಂದಿದೆ. ನಡೆದೆ ಇದ್ದರೆ ಬಹಳ ಸಂತೋಷ. ಒಂದು ಪಕ್ಷ ಈ ಯೋಜನೆಯನ್ನು ಸೇರಿಸುವಂತಹ ಪರಿಸ್ಥಿತಿ ಬಂದಾಗ ಮಾನ್ಯ ಮಂತ್ರಿಗಳು ಇದನ್ನು ಸೇರಿಸಬಾರದು. ಈಗಾಗಲೇ ಕಾಡಾನೆಗಳಿಂದ ಬಹಳ ಕಷ್ಟವನ್ನು ಅಲ್ಲಿನ ಜನರು ಅನುಭವಿಸುತ್ತಿದ್ದಾರೆ. ಇದರ ಜೊತೆಗೆ ಟೈಗರ್ ಪ್ರಾಜೆಕ್ಟ್‌ನ್ನು ಮಾಡಿಬಿಟ್ಟರೆ ಅಲ್ಲಿರುವ ಸುಮಾರು ೨೦-೨೫ ಗ್ರಾಮಗಳು ಏನು ಇವೆ, ಅಲ್ಲಿ ಜನರು ವಾಸ ಮಾಡುವುದಕ್ಕೇ ಆಗುವುದಿಲ್ಲ. ಆದುದರಿಂದ ಈ ಟೈಗರ್ ಯೋಜನೆಯನ್ನು ಕೈಗೊಳ್ಳಬೇಕೆಂದು ಸರ್ಕಾರದ ಮುಂದೆ ಏನಾದರೂ ಸ್ಕೀಮ್ ಇದ್ದರೆ ಅದನ್ನು ದಯವಿಟ್ಟು ಕೈಬಿಡಬೇಕೆಂದು ತಮ್ಮ ಮುಖೇನ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಎ. ಜೀವಿಜಯ.—ಮಾನ್ಯ ಅಧ್ಯಕ್ಷರೇ, ನಾವು ಆಗಲೇ ಉತ್ತರ ಕೊಟ್ಟಿದ್ದೇನೆ. ಅವರು ಕಾಡಾನೆಗಳಿಂದ ಪದೇ ಪದೇ ತೊಂದರೆಗೆ ಈಡಾಗುತ್ತಿದ್ದಾರೆಂದು ಪ್ರಸ್ತಾಪ ಮಾಡಿದ್ದಾರೆ. ಈ ತೊಂದರೆ ಜೊತೆಗೆ ಹುಲಿಗಳ ಕಾಟವನ್ನು ಅವರಿಗೆ ಕೊಡಲು ನಾನು ಇಚ್ಛಿಸುವುದಿಲ್ಲ.

Re(iii).—Indefinite hunger strike by Sri S. Suryanarayana Rao, M. L. A. urging the Government to implement the recommendations of the Minimum Wages Advisory Committee relating to the employees of 26 Big Industries.

SRI P. RAMACHANDRA RAO —Sir, I call the attention of the Hon'ble Minister for Labour and Wakf to the indefinite hunger strike by Sri S. Suryanarayana Rao, M. L. A., urging the Government to implement the recommendations of the Minimum Wages Advisory Committee relating to the employees of 26 Big Industries.

SRI AZIZ SAIT.—Sir, I may be permitted to make the following Statement.

During the year 1982, revision of minimum wages took place with regard to 21 employments and initial fixation in respect of six employments. Almost all the Notifications were challenged before the High Court of Karnataka by the Employers and the High Court of Karnataka struck down all the notifications with an observation to reconstitute the Advisory Board and to consider the preliminary notifications along with the objections and suggestions afresh and to issue final notifications. However, it is ordered that until the modified notifications are issued, the employers are bound to pay 50% of the enhanced wages to the workers. The Government of Karnataka have filed an appeal before the division bench of the High Court and obtained a stay order on the judgment of the single

bench in respect of six employments where minimum wages have been fixed for the first time. The final orders of the Division Bench are awaited.

In the meanwhile, Government of Karnataka have approached the Division Bench to permit the Government to reconstitute the Minimum Wages Advisory Board as per the direction of the Single bench of the High Court, reserving the right of the Government to go on appeal against the orders of the learned Single Judge of the High Court. The division bench accorded permission to the Government to reconstitute the Minimum Wages Advisory Board and to consider the objections and suggestions filed by the parties afresh and to fix/revise the minimum wages in respect of the notifications.

The Government of Karnataka reconstituted the Advisory Board in their G. O.No. SWL 12 IMW 83, dated 29.8.1983. In this Advisory Board, there are 7 representative of employers side, 7 from employees side and 7 indepent members. Shri S.Suryanarayana Rao is also a Member of theAdvisory Board on behalf of employees. The first meeting of the Board was held on 10.11.1983 and subsequently on many days. The 1st meeting of the Board was held on 29.3.1984 and 30.3.1984. The Board has completed the discussions in repect of all the draft Notifications and has sent the proceedings in respect of 16 employments. The proceedings in respect of another three employments are expected to be sent in a day or two. with regard to remaining six employments, the same is to be placed before the Board for confirmation. The next meeting of the Board will be held on 27.4.1984.

It is a surprise that Shri S. Suryanarayana Rao, being a Member of the Board and having participated in the deliberations of the Board's meetings and being also aware of the developments, has chosen to go on a hunger strike is, probably known to the Hon'ble Member himself better. After receiving the proceedings of the Board, the Government has to follow certain established procedures and norms, which my Ministry cannot deviate. Having known that the previous Government had burnt its fingers on this issue and the Hon'ble High Court, had to intervene in the matter, my Ministry would not like to indulge in any deviation in the procedures more so when the matter has been dealt with in detail by the Hon'ble High Court. Before, notification is caused to be gazetted, it has to be thoroughly scrutinised by the Labour Secretary and then it has to be further scrutinise by the Law Department and then only it finally goes to the printing press. Then the press would have to find place

and cause the same to be published in the Gazette. The press is answerable to the Government as well as to the Legislature, because of the pressure of the work. However, these Notifications would be gazetted on priority basis. I understand the anxiety of the Member. The Government is fully aware of the need for publishing this notification. I would do so, as early as possible I leave the decision to the Hon'ble Member himself and would only request Shri Suryanarayana Rao, Hon'ble Member of this House and a Member of the CITU to break his fast.

ಶ್ರೀ ಪಿ. ರಾಮಚಂದ್ರರಾವ್,—ಮಾನ್ಯ ಅಧ್ಯಕ್ಷರೇ, ಈ ೨೬-೨೭ ಕೈಗಾರಿಕೆಗಳಲ್ಲಿ ಕಳೆದ ೧೯೭೮ನೇ ಇಸವಿಯಲ್ಲಿ ಯಾವ ಒಂದು ಮಿನಿಮಮ್ ವೇಜಸ್ ನೋಟಿಫಿಕೇಷನ್ ಪ್ರಕಾರ ಫಿಕ್ಸ್ ಆಗಿತ್ತೊ ಅದೇ ಮಿನಿಮಮ್ ವೇಜಸ್ ಇವತ್ತೂ ಇದೆ. ಕೆಲವು ಕಡೆ ಮಾತ್ರ ಹೈಕೋರ್ಟ್ ಹೇಳಿದ ಹಾಗೆ ಹೆಚ್ಚು ವಿನಿಮಮ್ ವೇಜಸ್ ಕೊಡುತ್ತಿದ್ದಾರೆ. ಈಗ ಸುಮಾರು ೮೦ ಲಕ್ಷ ಜನ ಅಥವಾ ೧ ಕೋಟಿ, ಜನ ಅನ್‌ಆರ್ಗನೈಸ್ಡ್ ವರ್ಕರ್ಸ್ ಏನಿದ್ದಾರೆ, ಇವರಿಗೆ ಮಿನಿಮಮ್ ವೇಜಸ್ ಕೊಡತಕ್ಕ ವಿಚಾರದಲ್ಲಿ ೧೯೭೮ನೇ ಇಸವಿಯಿಂದ ರಿವಿಜನ್ ಇಲ್ಲ ಎಂದು ಹೇಳಿದರೆ ಹೇಗೆ ? ಇದು ಹೈಕೋರ್ಟಿಗೆ ಹೋಯಿತು. ಇದರ ವಿರುದ್ಧ ಜಡ್ಜ್‌ಮೆಂಟ್ ಬಂದಿತ್ತು. ಈ ಹೈಕೋರ್ಟ್ ಜಡ್ಜ್‌ಮೆಂಟ್ ಬಂದ ನಂತರ ಸರ್ಕಾರ ಬದಲಾವಣೆ ಆಯಿತು. ಸರ್ಕಾರ ಬದಲಾವಣೆ ಆದ ೬-೮ ತಿಂಗಳ ನಂತರ ಒಂದು ಕಮಿಟಿ ಕಾನ್‌ಸ್ಟಿಟ್ಯೂಟ್ ಆಯಿತು. ಈ ಕಮಿಟಿ ಕಾನ್‌ಸ್ಟಿಟ್ಯೂಟ್ ಆಗುವ ಮೊದಲು, ಲಾ ಡಿಪಾರ್ಟ್‌ಮೆಂಟ್ ನಲ್ಲಿ, ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಈ ಜಡ್ಜ್‌ಮೆಂಟ್ ಮೇಲೆ ಚರ್ಚೆ ನಡೆದು ಇದರ ಇಂಪ್ಲಿಕೇಷನ್ಸ್ ಏನು, ಇವರ ಆಸ್‌ಪೆಕ್ಟ್‌ಸ್ ಏನು ಇದೆಲ್ಲಾ ರಿಕನ್‌ಸೀಡರ್ ಆಗಿ, ಕನ್‌ಸಿಡರ್ ಪ್ರೊಪೋಜರ್ ಬಂದು, ರೆಕಮೆಂಡ್ ಆಗಿ ಲಾ ಡಿಪಾರ್ಟ್‌ಮೆಂಟ್‌ಗೆ ಬಂದ ನಂತರ ಕೂಡಾ ಅದರ ರೂಪ ಸರಿ ಇದೆಯೋ ಇಲ್ಲವೋ ಎಂದು ನೋಡಬೇಕಾಗಿತ್ತು. ಲಾ ಡಿಪಾರ್ಟ್‌ಮೆಂಟ್‌ನವರು, ಹೈಕೋರ್ಟ್ ಜಡ್ಜ್‌ಮೆಂಟ್‌ನ ವೇರಿಯಸ್ ಆಸ್‌ಪೆಕ್ಟ್‌ಸ್ ಮತ್ತು ಇಂಪ್ಲಿಕೇಷನ್ಸ್ ಬಗ್ಗೆ ಇನ್‌ಡೆಪ್ತ್ ಸ್ಟಡಿ ಮಾಡಬೇಕಾಗಿತ್ತು. ಹಾಗೆ ಮಾಡದೇ ಇರುವುದರಿಂದ ಇವತ್ತು ನಮ್ಮಂಥ ಪ್ರತಿನಿಧಿಗಳಿಗೆ ಮಾತ್ರವಲ್ಲ. ಕೈಗಾರಿಕೆಗಳಿಗೆ ಬಹಳ ತೊಂದರೆಯಾಗುತ್ತಿದೆ. ಏಕೆಂದರೆ ನಾಲ್ಕೈದು ವರ್ಷಗಳಿಂದ ಮಿನಿಮಮ್ ವೇಜಸ್ ಸಿಗದೇ ಹೋದರೆ ಕಾರ್ಮಿಕ ವರ್ಗದವರು ಹೇಗೆ ಬದುಕುವುದಕ್ಕಾಗುತ್ತದೆ ? ಈ ಆಡಳಿತ ಈಗ ಲಾ ಡಿಪಾರ್ಟ್‌ಮೆಂಟಿನಲ್ಲಿದ್ದು ಈಗ ಮತ್ತೆ, ಅದಕ್ಕೆ ಮತ್ತೊಂದು ಎಕ್ಸ್‌ಪರ್ಟ್ ಕಮಿಟಿಯನ್ನು ಫಾರ್ಮ ಮಾಡಿದರು. ಈ ವಿಷಯವನ್ನು ನಾನು ಮತ್ತೆ ವಿತಕ್ಕೆ ಒತ್ತಿ ಹೇಳುತ್ತಿದ್ದೇನೆ ಏನೆಂದರೆ ಈ ವಿಚಾರ ಇನ್ನೂ ಮುಂದೆಯೂ ಡಿಲೇ ಆಗದಂತೆ ನೋಡಿಕೊಳ್ಳಬೇಕು ಎನ್ನುವುದಕ್ಕೆ ಮಾತ್ರ ಹೇಳುತ್ತಿದ್ದೇನೆ.

ಎಂ. ಎಸ್. ಕೃಷ್ಣನ್ —ಮಾನ್ಯ ಮಂತ್ರಿಗಳು ಈ ವಿಚಾರದಲ್ಲಿ ಕೆಲವೊಂದು ಹೇಳಿಕೆಗಳನ್ನು ಕೊಟ್ಟಿದ್ದಾರೆ. ಆದರೆ ಇದರಲ್ಲಿರುವ ವಿವರಗಳನ್ನು ಸ್ವಲ್ಪ ವಿವರವಾಗಿ ನೋಡಬೇಕಾಗಿದೆ ಮತ್ತೆ ರಾಮಚಂದ್ರರಾಯರು ಹೇಳಿದ ಹಾಗೆ ಈ ಪ್ರಶ್ನೆ ಬಹಳ ಗಂಭೀರವಾದ ಪ್ರಶ್ನೆಯಾಗಿದೆ. ಅನೇಕ ವರ್ಷಗಳಿಂದ ಯಾರು ಶೋಷಣೆಗೆ ಒಳಗಾಗಿದ್ದಾರೋ ಅವರಿಗೆ ಕನಿಷ್ಠ ಕೂಲಿ ನಿಗದಿ ಮಾಡಲಿಕ್ಕೆ ತಮಗೆ ಗೊತ್ತಿರುವ ಹಾಗೆ ಇಂದಿನ ಸರ್ಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿದ್ದು ಅವರು ಕನಿಷ್ಠ ಕೂಲಿಯನ್ನು ನಿಗದಿ ಮಾಡುವುದರಲ್ಲಿ ಸಂಬಂಧಪಟ್ಟ ಮಂತ್ರಿಗಳು ಹೀಗೆ ಮಾಡಿಕೊಂಡರು ಎನ್ನುವ ಬಗ್ಗೆ ಪತ್ರಿಕೆಯಲ್ಲಿ ಬಂದಿತ್ತು. ಆದಾದ ಮೇಲೆ ಇಲ್ಲಿಯವರೆಗೆ ೨೬ ಕೈಗಾರಿಕೆಗಳ ಬಗ್ಗೆ ಏನೋ ಒಂದು ವಿಚಾರ, ಏನೋ ಒಂದು ಕಾರಣ ಹೇಳಿಕೊಂಡು ಈ ವಿಚಾರವನ್ನು ಮುಂದೂಡುತ್ತಾ ಬಂದಿರುವುದು ಅಷ್ಟು ಸಮಂಜಸವಾಗಿ ಕಾಣುತ್ತಿಲ್ಲ. ಒಂದು ಸಾರಿ ಈ ವಿಚಾರವನ್ನು ಇತ್ಯರ್ಥ ಮಾಡಿದ ಮೇಲೆ ಅದರ ಪ್ರಕಾರ ಸಂಬಂಧಪಟ್ಟ ಕಾರ್ಖಾನೆಯವರು ಹೋಗಬೇಕು. ಆದ್ದರಿಂದ ಅವರು ಈ ವಿಚಾರವನ್ನು ರಿಕನ್ಸಿಡರ್ ಮಾಡಬೇಕು. ೨೬ ಕೈಗಾರಿಕೆಗಳಲ್ಲಿ ಸುಮಾರು ೨೦ ಕೈಗಾರಿಕೆಯವರು ಮಿನಿಮಮ್ ವೇಜಸ್‌ನ್ನು ಕೊಡಬೇಕೆಂದು ಕಮಿಟಿಯವರು ತೀರ್ಮಾನ ಮಾಡಿದ್ದಾರೆ. ತೀರ್ಮಾನ ಮಾಡಿದುದನ್ನು ಪಬ್ಲಿಶ್ ಮಾಡುವುದಕ್ಕೆ ಏನು ತೊಂದರೆ ಇದೆ ? ತೀರ್ಮಾನ ಮಾಡಿದ್ದರೆ ಇದರ ಬಗ್ಗೆ ಇದು ಪ್ರೊಸೆಸ್ ಆಗಬೇಕೆಂದು ಹೇಳುತ್ತಿದ್ದೇನೆ. ಇವತ್ತಿನ ದಿವಸ ತಾವು ಲಾ ಮಂತ್ರಿಗಳನ್ನು ಕರೆಸಿ, ಕೇಳಬೇಕು.

ನನಗೆ ತಿಳಿದು ಬಂದಿದ್ದು ಏನೆಂದರೆ ತಾವು ಲಾ ಮಂತ್ರಿಗಳನ್ನು ಕರೆಸಿ ಈ ವಿಚಾರದಲ್ಲಿ ತತ್ವ ಇಂಥದ್ದು ಎಂದು ಹೇಳಿದರೆ ಒಳ್ಳೆಯದು. ಅದು ತಡವಾಗುವುದಕ್ಕೆ ಕಾರಣ ಏನಾದರೂ ಇರಬೇಕು. ಅಷ್ಟು ತಡ ಆಗಿರುವುದರಿಂದ ನಮಗೆ ಅನುಮಾನಕ್ಕೆ ಆಸ್ಪದವಾಗಿದೆ ಇಲ್ಲಿ ಹೀಗಾವಾರು ಅಡ್ಡಿ ಆತಂಕಗಳು ಬಂದಿವೆ ಎಂದು ನನಗೆ ಕಂಡು ಬಂದಿದೆ. ಅಡ್ಡಿ ಆತಂಕಗಳು ಯಾವರೀತಿ ಬಂದಿವೆಯೋ, ಇಲ್ಲವೋ, ಆದರೂ ತಾವು ಈ ವಿಚಾರದಲ್ಲಿ ಪ್ರಯತ್ನ ಮಾಡಿದ್ದೀರೆಂದು ನಮಗೆ ಸ್ಪಷ್ಟವಾಗಿ ಗೊತ್ತಾಗಬೇಕು. ಈಗಾಗಲೇ ಕೆಲವಾರು ಕಾರ್ಖಾನೆಗಳ ಬಗ್ಗೆ ತೀರ್ಮಾನ ಮಾಡಿದ್ದಾರೆ. ಆ ತೀರ್ಮಾನದ ಬಗ್ಗೆ ನೋಟಿಫಿಕೇಷನ್ ನನ್ನು ತಾವುಗಳು ಹೊರಡಿಸಬೇಕು. ತಾವು ಇದನ್ನು ಡಿಲೇ ಮಾಡಿದರೆ, ಫ್ರೆಜರ್ ಬ್ರಿಡ್ಜ್ ಅವ್ ಆಗುತ್ತದೆ. ತಾವು ಜಾಗ್ರತೆ ಸಂಬಂಧಪಟ್ಟವರನ್ನು ಕರೆಯಿಸಿ, ಮಾಲೀಕರನ್ನು ಕರೆಯಿಸಿ ಈ ವಿಚಾರವನ್ನು ತತ್‌ಕ್ಷಣ ಮಂಗಿಸಿ ಬಿಡಿ. ಈ ಪ್ರಶ್ನೆಯನ್ನು ಇತ್ಯರ್ಥ ಮಾಡುವುದಕ್ಕೋಸ್ಕರ ಶ್ರೀ ಸೂರ್ಯನಾರಾಯಣ ರಾವ್ ಅವರು ಉಪವಾಸ ಮಾಡುತ್ತಿದ್ದಾರೆ. ಈ ಪ್ರಶ್ನೆಯ ಬಗ್ಗೆ ಆದಷ್ಟು ಬೇಗ ತಾವು ಇತ್ಯರ್ಥ ಮಾಡಿ, ಮಾನ್ಯ ಶ್ರೀ ಸೂರ್ಯನಾರಾಯಣ ರಾವ್ ಅವರನ್ನು ಒಪ್ಪಿಸಿ, ಕರೆಸಿಕೊಳ್ಳುವುದು ಒಳ್ಳೆಯದೆಂದು ನನಗನ್ನಿಸುತ್ತದೆ.

ಶ್ರೀ ಗೋವಿಂದ ಪಿ. ವಡೆಯರಾಜ್,—ಮಾನ್ಯ ಅಧ್ಯಕ್ಷರೇ ನಿನ್ನೆ ತಾರೀಖಿನಿಂದ ಈ ಸದನದ ಸದಸ್ಯರಾದ ಶ್ರೀ ಸೂರ್ಯನಾರಾಯಣ ರಾವ್ ಅವರು ಅನಿರ್ದಿಷ್ಟ ಕಾಲದ ಉಪವಾಸವನ್ನು ಮಾಡುತ್ತಾ, ಸರ್ಕಾರದ ೨೬ ಉದ್ಯಮಗಳಿಗೆ ಕನಿಷ್ಟ ವೇತನವನ್ನು ಜಾರಿಗೆ ತರಲಿಕ್ಕೆ ಒತ್ತಾಯಿಸುತ್ತಿದ್ದಾರೆ. ಈ ಬೆಳಿಗ್ಗೆ ನಾನು ಹೋಗಿ ಅವರನ್ನು ಕಂಡು ಮಾತನಾಡಿಕೊಂಡ ಬಂದಿದ್ದೇನೆ. ಅವರು ಕೆಲವು ವಿಷಯಗಳನ್ನು ಹೇಳಿದರು. ಮಾನ್ಯ ಮಂತ್ರಿಗಳ ಒಂದು ಹೇಳಿಕೆಗೂ, ಅವರು ಹೇಳತಕ್ಕಂತಹ ವಿಷಯಕ್ಕೂ ವ್ಯತ್ಯಾಸ ಕಾಣುತ್ತದೆ. ಮೊದಲನೇ ವಿಷಯ ಏನೆಂದರೆ, ಮಾನ್ಯ ಸದಸ್ಯರು ಕನಿಷ್ಟ ವೇತನ ನಿಗದಿ ಮಾಡತಕ್ಕಂತಹ ಕಮಿಟಿಯಲ್ಲಿ ಒಬ್ಬ ಸದಸ್ಯರಾಗಿದ್ದಾರೆ. ಅವರು ಹೇಳಿದ್ದರಲ್ಲಿ ೨೬ ಉದ್ಯಮಗಳಲ್ಲಿ ಸಂಬಂಧಪಟ್ಟ ರೆಕಮೆಂಡೇಶನ್ಸ್ ಎಲ್ಲಾ ತಯಾರಾಗಿದೆ. ಎನ್ನತಕ್ಕಂಥದ್ದನ್ನು ಎಲ್ಲಾ ಹೇಳಿದ್ದಾರೆ. ಮಾನ್ಯ ಮಂತ್ರಿಯವರು ೧೬-೧೧-೮೯ಕ್ಕೆ ಕಾರ್ಖಾನೆಗಳ ಬಗ್ಗೆ ವಿಶಾತ್ರ ಒಂದು ತೀರ್ಮಾನವಾಗಿದೆಯೆಂದು ಹೇಳಿದ್ದಾರೆ. ಅಲ್ಲಿ ನಾವು ಅವರು ಹೇಳಿದ್ದನ್ನು ಒಪ್ಪಬೇಕೋ ಅಥವಾ ನಂಬಬೇಕೊ ಅಥವಾ ರಾವ್ ಅವರು ಹೇಳಿದ್ದನ್ನು ನಂಬಬೇಕೆ ಏನೂ ತಿಳಿಯುತ್ತಿಲ್ಲ. ಶ್ರೀ ರಾವ್ ಅವರು ತಾಸರರೂ ಮಾತ್ರವೇ ಅಲ್ಲ ಆ ಸಮಿತಿಯ ಸದಸ್ಯರೂ ಆಗಿದ್ದಾರೆ. ೨೬ ಉದ್ಯಮಗಳಿಗೆ ಕನಿಷ್ಟ ಕೂಲಿಯನ್ನು ಗೊತ್ತುಮಾಡಿ ರೆಕಮಂಡೇಶನ್ಸ್ ಮಾಡುವುದಕ್ಕೆ ತಾವು ಇದನ್ನು ಸರಿಯಾದ ರೀತಿಯಲ್ಲಿ ನೋಡಿ. ಇವರು ಹೇಳುವುದರಲ್ಲಿ ಸತ್ಯ ಇದೆಯೋ, ನೀವು ಹೇಳುವುದರಲ್ಲಿ ಸತ್ಯ ಇದೆಯೇ ಎರಡನೇದಾಗಿ ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ರೆಕಮಂಡೇಶನ್ಸ್ ಲಾ ಡಿಪಾರ್ಟಮೆಂಟಿಗೆ ಹೋಗಿದೆ. ಈಗ ಎಷ್ಟು ಉದ್ಯಮಗಳಲ್ಲಿ ಈ ಕನಿಷ್ಟ ವೇತನವನ್ನು ಕೊಡಲು ಒಪ್ಪಿಕೊಂಡಿದ್ದಾರೆ ? ಅದನ್ನಾದರೂ ಪ್ರಕಟಿಸಲಿಕ್ಕೆ ತಮಗಿರುವ ತೊಂದರೆ ಏನು ? ನಾವು ಇದನ್ನು ಏಕೆ ಇನ್ಸಿಸ್ಟ್ ಮಾಡುತ್ತಿದ್ದೇವೆ ಎಂದರೆ, ಒಂದು ವರ್ಷದ ಕೂಲಿ ಕೊಡದೇ ಹೋದರೆ ಲಕ್ಷಾಂತರ ರೂಪಾಯಿ ನಷ್ಟ ಆಗುತ್ತದೆ. ಈ ಬಡ ಕೂಲೀಕಾರರು ಯಾರು ? ಹರಿಜನರು, ಗಿರಿಜನರು ಹೆಚ್ಚಾಗಿ ಈ ಕಾರ್ಖಾನೆಗಳಲ್ಲಿ ಕೆಲಸ ಮಾಡಿಕೊಂಡಿರುತ್ತಾರೆ. ಇವರಿಗೆ ಒಂದೊಂದು ರೂಪಾಯಿ ಕಡಿಮೆ ಕೊಟ್ಟರೂ ೨-೩ ಲಕ್ಷ ರೂಪಾಯಿಗಳ ನಷ್ಟ ಒಂದು ದಿವಸಕ್ಕೆ ಆಗುತ್ತದೆ. ೧೩೨ ಹ್ಯಾಂಡ್ ಈ ಒಂದು ತೊಂದರೆಯನ್ನು ಮಾನ್ಯಮಂತ್ರಿಗಳು ತಿಳಿದುಕೊಂಡುತಾವು ಮತ್ತು ಲಾ ಡಿಪಾರ್ಟಮೆಂಟ್ ಹ್ಯಾಂಡ್ ಇನ್ ಹ್ಯಾಂಡ್ ಕೆಲಸ ಮಾಡಿ. ಅವರು ಒಪ್ಪದ ಹಾಗೆಮಾಡುವುದಕ್ಕೆ ಬೇರೆ ಪ್ರಯತ್ನ ಕೂಡ ನಡೆದಿದೆಯೆಂದು ನಮಗೆ ತಿಳಿದು ಬಂದಿದೆ. ಸರ್ಕಾರ ಈ ರೀತಿಯಾಗಿ ಕೆಲಸ ಮಾಡತಕ್ಕದ್ದು ಸರಿಯಲ್ಲವಾ. ನಾವು ನಿಯಮ ೩೩೪ ರಲ್ಲಿ ಏನನ್ನು ಪ್ರಸ್ತಾಪ ಮಾಡಿದರೂಸಹ ಅದರ ಬಗ್ಗೆ ನಾವು ಸ್ವಲ್ಪ ಹೇಳಬೇಕಾಗುತ್ತದೆ. ಸರ್ಕಾರದವರು ಸರಿಯಾದ ಉತ್ತರ ಕೊಡಲಿಲ್ಲವೆಂದರೆ ಇದರ ಬಗ್ಗೆ ನಾವು ಕೇಳಬೇಕಾಗಂತ್ತದೆ.

SRI AZEEZ SAIT,—What is your doubt ?

SRI G. P. VADEYARAJ.—Some unseen hand is pressurising and working over the Law Department against the interest of these workers. ಅದಕ್ಕೋಸ್ಕರವಾಗಿ ಇದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೆನ್ನುವುದನ್ನು ವಿಚಾರ ಮಾಡಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಸದಸ್ಯರು ೨೬ ಉದ್ಯಮಗಳಿಗೆ ಸಂಬಂಧಪಟ್ಟಂತೆ

ಕನಿಷ್ಟ ವೇತನ ಗೊತ್ತುಮಾಡುವುದರ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಿನಿಮಂ ವೇಜಸ್ ಕಮಿಟಿಯಲ್ಲಿ ಮಾನ್ಯ ಸೂರ್ಯನಾರಾಯಣರಾವ್ ಅವರೂ ಕೂಡಾ ಸದಸ್ಯರಾಗಿದ್ದಾರೆ. ಅವರು ಈ ವಿಚಾರವನ್ನೆಲ್ಲಾ ವಿಚಾರಸ್ಸು ಮಾಡಿದ್ದಾರೆಂದು ಹೇಳಿದ್ದಾರೆ ಅದರ ಪ್ರಕಾರ ಕ್ರಮ ಕೈಗೊಳ್ಳಬೇಕು

ಶ್ರೀ ಪಿ. ರಾಮದೇವ್.—ಈಗಾಗಲೇ ನಮ್ಮ ಸ್ನೇಹಿತರಾದ ಮಾನ್ಯ ಸೂರ್ಯನಾರಾಯಣರಾವ್ ಅವರು ಕನಿಷ್ಟ ವೇತನವನ್ನು ಜಾರಿಗೆ ತರುವ ಬಗ್ಗೆ ಸರ್ಕಾರದ ನೀತಿ ವಿಳಂಬವಾದುದು ಎನ್ನುತಕ್ಕ ಮಾತನ್ನು ಹೇಳಿದ್ದಾರೆ. ನಾನಾದರೂ ಹೇಳತಕ್ಕದ್ದು ಇಷ್ಟೆ. ಮಾನ್ಯ ಸೂರ್ಯನಾರಾಯಣರಾವ್ ಅವರು ಸಮಿತಿಯ ಸದಸ್ಯರಾಗಿದ್ದರು. ಸಮಿತಿಯಲ್ಲಿ ವಿಚಾರಸ್ಸು ಮಾಡಿದ ವಿಚಾರವನ್ನು ಜಾರಿಗೆ ತರತಕ್ಕದ್ದರಲ್ಲಿ ಸರ್ಕಾರ ಕನಿಷ್ಟ ಪ್ರಯತ್ನವನ್ನೂ ಪಟ್ಟಿಲ್ಲ ಎನ್ನತಕ್ಕ ಮಾತನ್ನು ನಾನಂ ಹೇಳಂತಿದ್ದೇನೆ. ಸರ್ಕಾರಕ್ಕೆ ಇದರ ಬಗ್ಗೆ ಇರತಕ್ಕ ತೊಂದರೆ ಏನು ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ಕೆಲವಾರು ಕಾರ್ಖಾನೆಗಳವರು ಈ ವೇತನವನ್ನು ಜಾರಿಗೆ ಕೊಟ್ಟಿದ್ದಾರೆ. ಇದರಿಂದ ಲಕ್ಷಾಂತರ ಕಾರ್ಮಿಕರಿಗೆ ಹೆಚ್ಚಿನ ಪ್ರಯೋಜನ ಆಗುತ್ತದೆ. ಆದಕ್ಕಾಗಿ ಎಲ್ಲಾ ಕಾರ್ಖಾನೆಗಳವರೂ ಸಹ ಆಸಕ್ತಿ ವಹಿಸಿ ಇದನ್ನು ಜಾರಿಗೆ ತರಬೇಕು. ಈ ವಿಚಾರದಲ್ಲಿ ಹಿಂದಿನ ಸರ್ಕಾರದ ಮೇಲೆ ಒಂದು ಆಪಾದನೆ ಇದೆ. ಮಾಲೀಕರ ಪರವಾಗಿ ಯಾವುದೇ ಸರ್ಕಾರ ನಡೆದುಕೊಳ್ಳಬಾರದು. ಸೂರ್ಯನಾರಾಯಣರಾವ್ ಅವರು ಈ ಬಗ್ಗೆ ಉಪವಾಸ ಮಂಷ್ಕರ ಮಾಡುತ್ತಿದ್ದು ಅದು ಮೂರನೇ ದಿವಸಕ್ಕೆ ಬಂದಿದೆ. ಅವರು ಇದನ್ನು ನಿಲ್ಲಿಸಬೇಕು. ಮತ್ತು ಸರ್ಕಾರದವರು ಅವರಿಗೆ ಸೂಕ್ತ ಭರವಸೆಯನ್ನು ಕೊಡಬೇಕೆಂದು ನಾನು ವಿನ್ರಯ ಮಾಡುತ್ತಿದ್ದೇನೆ.

ಶ್ರೀ ಮೈಕೆಲ್ ಬಿ. ಫರ್ನಾಂಡಿಸ್.—ನಾನು ಇದರಲ್ಲಿ ಒಂದೇ ಒಂದು ವಿಚಾರ ಕೇಳುತ್ತೇನೆ. ಈಗ ಇದರಲ್ಲಿ ೨೭ ಉದ್ದಿಮೆಗಳು ಅಂತ ಇದೆ. ನೀವು ೧೬ ಉದ್ದಿಮೆಗಳ ಬಗ್ಗೆ ಹೇಳಿದ್ದೀರಿ. ಉಳಿದ ಉದ್ದಿಮೆಗಳ ಬಗ್ಗೆ ನಿಮ್ಮ ಅಭಿಪ್ರಾಯ ಏನು? ಎಲ್ಲವನ್ನೂ ಒಂದೇ ಸಾರಿ ಮಾಡಬೇಕು ಎನ್ನುವ ಅಭಿಪ್ರಾಯವೋ ಅಥವಾ ಒಂದೊಂದಾಗಿ ತೆಗೆದುಕೊಂಡು ಮಾಡಬೇಕು ಅನ್ನುವ ಅಭಿಪ್ರಾಯವೋ? ಒಟ್ಟನಲ್ಲಿ ಹೇಳುವುದಾದರೆ ಎಲ್ಲರಿಗೂ ಕೂಡ ಪರಿಹಾರ ಸಿಕ್ಕಬೇಕು ಎನ್ನುವ ಉದ್ದೇಶದಿಂದ ಅವರು ಉಪವಾಸ ಕುಳಿತಿದ್ದಾರೆ. ಎಲ್ಲರಿಗೂ ಪರಿಹಾರ ಸಿಕ್ಕುತ್ತದೆ ಅನ್ನುವ ಭರವಸೆಯನ್ನು ತಾವು ಕೊಟ್ಟರೆ ಮಾನ್ಯ ಸೂರ್ಯನಾರಾಯಣರಾವ್ ಅವರು ತಮ್ಮ ಉಪವಾಸ ಮುಷ್ಕರವನ್ನು ಹಿಂತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ.

SRI AZIZ SAIT.—I am only sorry that the Members have been wrongly informed of the fact I would like to reply first to Sri Ramdev. Since I am the President of the Beedi Workers Federation, I would like to make it very clear as to what I have done for them. The Minimum Wages Board which has been appointed for these 16 trades, has not yet discussed the Beedi Workers notification. That is going to come in the last There is some anxiety that there is some hotchpotch going on. Absolutely Members need not have any fear. When the notification was sent to the Law Department, the Law Secretary felt that as per the judgdment of Hon. Bopayya in the High Court of Mysore, these notifications should have been discussed and decided and recommended by the Wage Board otherwise it would be null and void and the notifications would have to be withdrawn and freshly taken to the Board. I called the Law Secretary in my chamber with a friend of mine, who is a wellversed labour expert Mr. Narasimhan. I discussed this threadbare and the Law Secretary accepted that he can notify these ehings. After that I called a meeting with my Departmental people like Secretary, Under Secretary and Labour Commissioner. Now we have sent a few cases back to the Law Secretary to give their legal verdict so that tomorrow there need not be any challange. I do not want to see any lacuna in

the notification as was done last time. My previous Government had burnt their fingers and I do not want to burn mp fingers and also I do not want to deviate from the procedures. It is out of way that I am saying that when I came to this Ministry, 600 Awerds were pending without Gazette notification. Today my friend will agree that almost all Awards have been notified in the Gazette which were pending from 1981. So they will at least have some confidence in me.

ಶ್ರೀ ಎಂ. ಎಸ್ ಕೃಷ್ಣನ್.—ಅದಕ್ಕೆ ನಾನು ಕಾರಣ ಕೊಡುತ್ತೇನೆ. ಈ ಮನೆಯಲ್ಲೇ ಆ ವಿಚಾರ ಹೇಳಿದ ಮೇಲೆ, ಅದರ ಬಗ್ಗೆ ಚರ್ಚೆಯಾದ ಮೇಲೆ ನಾವು ಅವಾರ್ಡನ್ನು ಪಬ್ಲಿಷ್ ಮಾಡಬೇಕೆಂದು ಹೇಳಿದ ಮೇಲೆ ೬೦೦ ಕೇಸಸ್ ಬಗ್ಗೆ ಅವಾರ್ಡ್ ಅನ್ನು ಪಬ್ಲಿಷ್ ಮಾಡಿದ್ದೀರಿ. ಒಟ್ಟು ೩ ಸಾವಿರ ಕೇಸಸ್ ಇವೆ. ಈಗ ಅವಾರ್ಡ ಮಾಡಿರತಕ್ಕಂಥಾದ್ದರ ಬಗ್ಗೆ ತಮಗೆ ನಾನು ಧನ್ಯವಾದಗಳನ್ನ ಅರ್ಪಿಸುತ್ತೇನೆ. ಉಳಿದವುಗಳನ್ನು ಬಿಡೇ ಮಾಡುವುದಕ್ಕೆ ಹೋಗಬೇಡಿ. ವಿತ್ಕ್ಕಂದರೆ ಶ್ರೀಲಕ್ಷ್ಮೀನಾರಾಯಣ ರವರ ಡಿವಾರ್ಟ್‌ಮೆಂಟ್ ಮುಂದೆ ಏನು ಮಾಡುತ್ತಾರೆ ಎನ್ನುವುದನ್ನು ಹೇಳುವ ದಕ್ಕಾಗುವುದಿಲ್ಲ.

SRI AZIZ SAIT.—I do not want any pat. I know this job. I will do my job honestly and I assure you that these notifications will be published in the Gazette as early as possible. Sri Ramdev suggested that I should go to Sri Suryanarayana Rao. I am not well and all this day I am busy with Cabinet meeting. I request Mr. Suryanarayana Rao to break his fast. First of all he should not have chosen the path of hunger strike. We have only 16 notifications. In respect of three, recommendations are to be approved by the Board. In two or three days time Iam going to get it. Again there is a final meeting on 27th of this month where remaining notifications would be taken up. I assure you, only procedural matters i.e., legal wordings, have got to be scrutinised. Otherwise may go to the court get it struck down. I do not want to do that.

SRI M. S. KRISHNAN.—Sri Suryanarayana Rao stated that in respect of 26 notifications there has been a decision. The Hon'ble Minister says that the decision has been taken only in respect of 16 notifications. Which one is correct ?

ಶ್ರೀ ಪಿ. ರಾಮಚಂದ್ರರಾವ್.—ನಾನೂ ಸಹ ವೇಜಸ್ ಕಮಿಟಿಗೆ ಹೋಗಿದ್ದೆ. ಅದರ ಬಗ್ಗೆ ಒಂದು ಕೇವ್ಚನ್ಗೆ ಬಂದಿತ್ತು. ಆದರೆ ಅದಂ ವಂಂದಿನ ಇನ್ನೊಂದು ಮೀಟಿಂಗ್‌ನಲ್ಲಿ ಕನ್‌ಫರ್ಮ್ ಆಗಬೇಕಾಗಿತ್ತು, ಅಷ್ಟೆ.

SRI AZIZ SAIT.—I will read out ehe lists. In respect of the following, recommendations are received from the Minimum Wages Advisory Board.

1. Public Motor Transport
2. Cotton Ginning and Press Manufacturing Factory
3. Employment in any Agriculture (Grape yards and Wine Yards), and Horticulture
4. Printing Presses
5. Khandasari Sugar Factories
6. Toddy tapping
7. Ceramics, Stoneware and Potteries works
8. Construction or maintenance of roads or in building operations
9. Carpentary industry and saw mill industry
10. Film industry
11. Sericulture
12. Stone Crushing and stone crushing in quaries.
13. Stone breaking or stone crushing
14. Agricultural Labourers
15. Soil Conservation
16. Chinkona, Rubber, Tea plantations

Recommendations yet to be received from the Minimum Wage, Advisory Board are as follows.

1. Coffee curing works
2. Plywood industry
3. Tanneries and leather manufacturing industry
4. Agarbathi Industry
5. Tile Industry
6. Tailoring industry
7. Rice, floor or Dhal mills
8. Reeidential hotels and houses I
9. Residential hotels and eating houses II
10. Cardamom Malais and cardamom gardens

SRI P. RAMACHANDRA RAO —I would like to inform the House that all these have been recommended by the Committee.

SRI AZIZ SAIT.—I am giving you the latest information. It is the Chai man of the Board who has to send me.

SRI M. S. KRISHNAN.—There is some confusion. The Hon'ble Minister has read out the list of industries in respect of which

recommendations are to be made. ಇಂಡಸ್ಟ್ರೀಸ್ ಬಗ್ಗೆ ಇದರಲ್ಲಿ ಇದೆ. ರೆಕಮೆಂಡೇಷನ್ ಮಾಡಿದ್ದೀರಿ. ಆದರೆ ಇನ್ನು ೧೦ ಕೈಗಾರಿಕೆಗಳ ಬಗ್ಗೆ ಯಾವಾಗ ತೀರ್ಮಾನ ತೆಗೆದು ಕೊಳ್ಳುತ್ತೀರಿ ಅನ್ನುವುದನ್ನು ತಾವು ಏನೂ ಹೇಳಲಿಲ್ಲ.

ಶ್ರೀ ಅಜೀಜ್ ಸೇಠ್.—ಆ ಬಗ್ಗೆ ಅವರಿಂದ ಇನ್ನೂ ರೆಕಮೆಂಡೇಷನ್ ಆಗಿ ಬಂದಿಲ್ಲವಲ್ಲಾ.

MR. SPEAKER.—The Government has not received the recommendation.

SRI AZIZ SAIT.—This is the latest information as on today.

SRI M. S. KRISHNAN.—The Hon. Member must be able to get the ten recommendations. According to the Hon. Member. who is a responsible Member of tho Committee, it has completed. Please get that and see that it is published immediately.

SRI AZIZ SAIT.—I quite agree. But that has to come to me through the Chairman. This is my difficulty. The Member might have discussed. But it has to come from the Secretary and the Chairman of the Board. I do not want to interefere in these things.

SRI M.S. KRISHNAN.—How many days, take to come from the Chairman?

MR. SPEAKER.—That is the responsibility of the Committee, he says.

ಶ್ರೀ ಪಿ ರಾಮದೇವ್.—ಈ ಕಾರ್ಮಿಕರ ಬಗ್ಗೆ ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ ಎಂದರೆ, "One of the few S at s which have not impleme ted the Minimum Wages is Karnataka". ಎಂದು, ನೀವು ಅಲ್ಲಿಂದ ಇನ್ನೂ ಬಂದಿಲ್ಲ ಎಂದರೆ ಹೇಗಾಗುತ್ತದೆ. ಕಾರ್ಮಿಕರ ಬಗ್ಗೆ ರೈತರ ಬಗ್ಗೆ ಕಳಕಳಿ ಇಟ್ಟುಕೊಂಡಿರತಕ್ಕಂಥಾ ಸರ್ಕಾರ ಹೀಗೆ ಹೇಳಿದರೆ ಹೇಗೆ! ಹಲವಾರು ವರ್ಷಗಳಿಂದಲೂ ಕೂಪ ಹೀಗೆಯೇ ಆಗುತ್ತಾ ಇದೆ.

MR. SPEAKER.—That is a statutory body. Please follow his sayings. It has to send. He cannot interfe e in their affairs.

SRI P. RAMDEV.—He must write and get it.

SRI AZEEZ SAIT.—Let this Hon'ble Member should know that due to some actions of the Labour Minister of the previous Government, the matter went to the High Court and all the notification was struck. After I took over, I pleaded the High Court and sought their permission, appointed a Committee and then I have revealed it here. After that, in November I got the Committee appointed and the Committee had met and sat day by day and completed about 16 industries, which I have received. Of the other three, proceedings of the previous meetings have to be confirmed. Whatever they decide to-day when the Board meets, the confirmation of the proceedings of the previous meeting will have to be recorded and it has to go to the Labour Department and from there, it has to come to my Secretariat. After scrutiny I send it to the Law department. There was a hurdle

and I got it cleared. Why don't you bear with me and understand things. Having said all these, what suspicion they have got, I do not know.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಬಗ್ಗೆ ನಮಗೆ ಅನುಮಾನ ಇಲ್ಲ. ಮಾನ್ಯ ಸಚಿವರು, ಆಡ್ಜ್ ಟ್ರಿ ಬೋರ್ಡಿಗೆ ಕಳುಹಿಸಿದ್ದೇವೆಂದು ಹೇಳಿದ್ದಾರೆ. It is linked to the cost of living index. Two paise per point is advised. By this delay, every day the worker will loss. That is why I earnestly request the Hon. Minister to see that recommendations are published.

MR. SPEAKER.—Should he not at least receive the recommendation of the Committee ?

SRI M. S. KRISHNAN.—Receiving the recommendation is not from New Delhi to Bangalore ; from one office to the other.

SRI AZEEZ SAIT.—I only wonder. There are papers which take 3 months to move from one department to another in Vidhana Soudha itself.

ONE HON. MEMBER.—It shows the efficiency of the Government.

ಅಧ್ಯಕ್ಷರು.—ತಾವು ಹಾಗೆ ಹೇಳಬೇಡಿ.

ಶ್ರೀ ಗೋವಿಂದ ಪಿ. ಒಡೆಯರ್.—ಕೂಲಿಗಾರರ ಸಮಸ್ಯೆ ಬಂದಿರುವುದರಿಂದ ಮಾನ್ಯ ಮಂತ್ರಿಯವರು ತಕ್ಷಣವೇ ಕಳುಹಿಸುವುದಕ್ಕೆ ಸಾಧ್ಯವಿತ್ತು, ಅವರು ಸೀರಿಯಸ್ಸಾಗಿ ತೆಗೆದುಕೊಳ್ಳು ತ್ತಿಲ್ಲ.

SRI M. S. KRISHNAN.—I want one assurance. In respect of all these industries, already there are recommendations. Why not that at least be published.

SRI AZEEZ SAIT.—I told the hon'ble member that as early as possible I get it published. "As early as possible", it is a simple English.

MR. SPEAKER.—Now let us go to the matter under rule 334.

ಮಾನ್ಯ ಮಂತ್ರಿಗಳವರ ಹೇಳಿಕೆ

ಸ್ಟೈಫಂಡಡಿ ಪದವೀಧರರ ನೇಮಕಾತಿ ಬಗ್ಗೆ

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳವರು)—ಮಾನ್ಯ ಅಧ್ಯಕ್ಷರೇ, ಸ್ಟೈಫಂಡರೀ ಪದವೀಧರರಿಗೆ ಸಂಬಂಧಪಟ್ಟಂತೆ ಒಂದು ಹೇಳಿಕೆ ಕೊಡುತ್ತೇನೆಂದು ಹೇಳಿದ್ದೆ, ಅದರ ಬಗ್ಗೆ ಸದನಕ್ಕೆ ವಿಷಯ ತಿಳಿಸುವುದಕ್ಕೆ ಇಚ್ಛಿಪಡುತ್ತೇನೆ ಸ್ಟೈಫಂಡರೀ ಪದವೀಧರರುಗಳಿಗೆ ಕಾಯಂ ಕೆಲಸ ಸಿಗುವವರೆಗೆ ಅವರನ್ನು ಮುಂದುವರಿಸುವ ಬಗ್ಗೆ ಅನೇಕ ಸಲ ಚಳುವಳಿ ಮಾಡಿದರು. ಅವರಿಂದಿಗೆ ಸರ್ಕಾರ ಅನೇಕ ಸಲ ವಿಚಾರ ವಿನಿಮಯ ಮಾಡಿದೆ. ಹಿಂದಿನ ಸರ್ಕಾರ ಆಜ್ಞೆ ಮಾಡಿದ ಮೇಲೆ ಅದನ್ನು ಹೈಕೋರ್ಟಿನಲ್ಲಿ ಹಾಕಿ ಜಾಗ್ರತೆಯಾಗಿ ಇತ್ಸರ್ಥ ಮಾಡಬೇಕೆನ್ನುವ ಹೈಕೋರ್ಟಿನ ಆದೇಶದ ಮೇರೆಗೆ ನಿರ್ಣಯ ತೆಗೆದುಕೊಂಡು ರೆಕ್ರೂಟ್‌ಮೆಂಟ್ ಪಾಲಿಸಿ ಬಗ್ಗೆ ಸರ್ಕಾರ ಆಜ್ಞೆ ಹೊರಡಿಸಿದೆ. ಮೊದಲನೆ ಸಲ ಸ್ಟೈಫಂಡರೀ ಪದವೀಧರರು ಇಂಟರ್‌ವ್ಯೂ ಹೋದರೆ ಕೆಲಸದಿಂದ ತೆಗೆಯಬೇಕೆನ್ನುವ ಅರ್ಥ ಬರುವ ರೀತಿಯಲ್ಲಿ ಅದು ಇದೆ, ಸರ್ಕಾರ ಅದನ್ನು ಪುನರ್ ಪರಿಶೀಲನೆ ಮಾಡಿದೆ. ಒಂದು ಸಲ ಇಂಟರ್‌ವ್ಯೂ ಹೋದಾಗ ಕೆಲಸದಿಂದ ತೆಗೆಯಬೇಕೆಂಬುದನ್ನು ತೆಗೆದುಹಾಕ ಬೇಕೆಂದು ಸರ್ಕಾರ ನಿರ್ಣಯ ಮಾಡಿದೆ. ಟರ್ಮಿನೇಟ್ ಮಾಡುವುದನ್ನು ನಿಲ್ಲಿಸಲಾಗುವುದು.